**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 201/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋಪಾಲಕೃಷ್ಣ |
| ತಂದೆಯ ಹೆಸರು | : | ಕೃಷ್ಣಯ್ಯ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಮಂಗಳವಾದ್ಯ ನುಡಿಸುವ ಕೆಲಸ |
| ವಾಸಸ್ಥಳ | : | ಬೊಪ್ಪನಹಳ್ಳಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 10.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1, ಚಾಸಾ-2 ರಿಂದ ಚಾಸಾ-7 ಮತ್ತು ಆರೋಪಿ ನನಗೆ ಗೊತ್ತು, ಅವರು ನಮ್ಮ ಗ್ರಾಮದವರು.

ದಿನಾಂಕಃ 09.02.2023 ರಂದು ರಾತ್ರಿ 08.30 ಗುಂಟೆ ಸುಮಾರಿಗೆ ನಾನು ಮತ್ತು ಚಾಸಾ-1 - ಮಹೇಂದ್ರ ಬೊಪ್ಪನಹಳ್ಳಿ ಗೇಟ್ ಬಳಿ ನಡೆದುಕೊಂಡು ಬರುವಾಗ ಆರೋಪಿ ಸೋಮೇಶ ಮೋಟಾರ್ ಸೈಕಲ್ ನಲ್ಲಿ ಬಂದು ಅದನ್ನು ನಿಲ್ಲಿಸಿ ಈ ಹಿಂದೆ ಅಂದರೆ 8 ನೇ ತಾರೀಖಿನಂದು ಆದ ಜಗಳದ ಬಗ್ಗೆ ನನ್ನ ತಮ್ಮನ ಮಗನ ಜೊತೆ ಏಕೆ ಗಲಾಟೆ ಮಾಡಿರುತ್ತೀಯಾ ಎಂದು ಚಾಸಾ-1 ರವರನ್ನು ಕೇಳಿರುತ್ತಾರೆ.

ಸದರಿ ವಿಚಾರಕ್ಕೆ ಆರೋಪಿ ಮತ್ತು ಚಾಸಾ-1 ರವರ ನಡುವೆ ಮಾತಿನ ಚಕಮಕಿ ಆಗಿ, ಚಾಸಾ-1 ರವರನ್ನು ಆರೋಪಿಯು ನೆಲಕ್ಕೆ ಕೆಡವಿರುತ್ತಾರೆ. ಆಗ ನಾನು ಚಾಸಾ-1 ರವರನ್ನು ಆರೋಪಿಯ ಕೈಯಿಂದ ಬಿಡಿಸಿಕೊಂಡು ನಾವಿಬ್ಬರು ನಡೆದುಕೊಂಡು ಹೋಗುವಾಗ ಆರೋಪಿಯು ತನ್ನ ಮೇಟಾರ್ ಸೈಕಲ್ ನಲ್ಲಿದ್ದ ಬಿಯರ್ ಬಾಟಲಿಂದ ಚಾಸಾ-1 ರವರ ತಲೆಗೆ ಹೊಡೆದಿರುತ್ತಾನೆ ಮತ್ತು ಬೋಳೀಮಗನೇ, ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮ ತಾತನ ವಿಚಾರದಲ್ಲಿ ಇದೇ ರೀತಿ ಗಲಾಟೆಯಾಗಿತ್ತು, ಅದನ್ನು ನಾನು ಜಯಿಸಿರುತ್ತೇನೆ, ಈ ಕೇಸಿನಲ್ಲೂ ನಾನು ಜಯಿಸುತ್ತೇನೆಂದು ಹೇಳಿ ಹೊರಟು ಹೋಗಿರುತ್ತಾರೆ. ಆಗ ನಾನು ಚಾಸಾ-1 ರವರ ಅಣ್ಣ ಚಾಸಾ-3 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿ ನಾವೆಲ್ಲರೂ ಚಾಸಾ-1 ರವರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿರುತ್ತೇವೆ.

ದಿನಾಂಕಃ 12.02.2023 ರಂದು ಬೆಳಿಗ್ಗೆ ಸುಮಾರು 11.00-11.30 ಸುಮಾರಿಗೆ ಪೋಲೀಸರು ಘಟನೆ ನಡೆದ ಜಾಗಕ್ಕೆ ಬಂದಾಗ ಚಾಸಾ-6, ಚಾಸಾ-7 ನನ್ನ ಜೊತೆ ಇದ್ದರು. ಮಹಜರ್ ಮಾಡುವ ಕಾಲಕ್ಕೆ ಪೋಲೀಸರು ಘಟನೆ ನಡೆದ ಸ್ಥಳದಲ್ಲಿ ಬಿಯರ್ ಬಾಟಲಿನ ಚೂರುಗಳನ್ನು ತೆಗೆದುಕೊಂಡಿರುತ್ತಾರೆ. ಸದರಿ ಗಾಜಿನ ಚೂರುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸುತ್ತಾರೆ. ಗಾಜು ತುಂಬಿದ ಚೀಲವನ್ನು ಈಗಾಗಲೇ ಮುದ್ದೆಮಾಲು-1 ಮತ್ತು ಕಿಂಗ್ ಫಿಶರ್ ಬಿಯರ್ ಬಾಟಲಿಯ 10 ಚೂರುಗಳನ್ನು ಮುದ್ದೆಮಾಲು-2 ಎಂದು

ಗುರುತಿಸಲಾಗಿದೆ. ಮಹಜರ್ ಅನ್ನು **ನಿ.ಪಿ.-5**, ಸಾಕ್ಷಿಯ ಸಹಿಯನ್ನು **ನಿ.ಪಿ.-5(ಎ)** ಎಂದು ಗುರುತಿಸಲಾಯಿತು. ಪೋಲೀಸರ ಮುಂದೆ ಘಟನಾ ಸಂಬಂಧ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಆರೋಪಿಯು ಬಿಯರ್ ಬಾಟಲಿಯಿಂದ ಚಾಸಾ-1 ರವರ ತಲೆಗೆ ಹೊಡೆಯಲು ಬಂದಾಗ ಚಾಸಾ-1 ರವರು ತನ್ನ ಎಡಗೈಯನ್ನು ಅಡ್ಡ ಹಿಡಿದಿದ್ದರಿಂದ ಬಿಯರ್ ಬಾಟಲಿಯಿಂದ ಆತನ ಎಡಗೈನ ಹೆಬ್ಬೆರಳಿಗೆ ಪೆಟ್ಟಾಗಿರುತ್ತದೆಂದರೆ ಸರಿ. ಬಿಯರ್ ಬಾಟಲಿ ಹೊಡೆದು ಚೂರಾಗಿ ಚಾಸಾ-1 ರವರ ಹಣೆಗೆ ಮತ್ತು ಮೂಗಿನ ಭಾಗಕ್ಕೆ ರಕ್ತಗಾಯ ಆಗಿರುತ್ತದೆಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಆರ್.ಎಸ್. ವಕೀಲರಿಂದಃ**

ಆರೋಪಿಯು ಗ್ರಾಮ ಲೆಕ್ಕಾಧಿಕಾರಿಯ ಬಳಿ ಹೆಬ್ಬಲಗುಪ್ಪೆ ಗ್ರಾಮದ ಗ್ರಾಮ ಸೇವಕನಾಗಿ ಕೆಲಸ ಮಾಡುತ್ತಿದ್ದಾನೆಂದರೆ ಸರಿ. ದಿನಾಂಕಃ 08.02.2023 ರಂದು ಆರೋಪಿ ಮತ್ತು ಚಾಸಾ-1 ರವರ ನಡುವೆ ಜಗಳ ಆಗಿರುತ್ತದೆಂದು ತಮಗೆ ಹೇಗೆ ಗೊತ್ತಾಯಿತು ಎಂದು ಕೇಳಲಾಗಿ ಸಾಕ್ಷಿಯು ದಿನಾಂಕಃ 09.02.2023 ರಂದು ಆರೋಪಿ ಚಾಸಾ-1 ರವರ ಮೇಲೆ ಜಗಳ ಮಾಡಿದಾಗ ಗೊತ್ತಾಯಿತು ಎಂದು

ನುಡಿಯುತ್ತಾರೆ. ದಿನಾಂಕಃ 09.02.2023 ರಂದು ನಾನು ಮತ್ತು ಚಾಸಾ-1 ಬೊಪ್ಪನಹಳ್ಳಿ ಗೇಟ್ ನಿಂದ ಬೊಪ್ಪನಹಳ್ಳಿ ಗ್ರಾಮಕ್ಕೆ ನಡೆದುಕೊಂಡು ಹೋಗುತ್ತಿದ್ದೆವು. ಆರೋಪಿಯು ಮೋಟಾರ್ ಸೈಕಲ್ ನಿಂದ ಬಂದು ಚಾಸಾ-1 ರವರಿಗೆ ಬಿಯರ್ ಬಾಟಲಿಯಿಂದ ಹೊಡೆದಿರುತ್ತಾರೆಂದು ಹೇಳಿದ್ದು, ಮೋಟಾರ್ ಸೈಕಲ್ ನಂಬರ್ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಚಾಸಾ-1 ರವರ ಫೋನ್ ನಿಂದ ಅವರ ಅಣ್ಣ ಚಾಸಾ-3 ರವರಿಗೆ ಫೋನ್ ಕರೆ ಮಾಡಿರುತ್ತೇನೆ. ಫೋನ್ ಮೂಲಕ ಚಾಸಾ-3 ರವರಿಗೆ ಮಾಹಿತಿ ನೀಡಿರುತ್ತೇನೆಂದು ತಮ್ಮ ಹೇಳಿಕೆಯಲ್ಲಿ ಹೇಳಿರುತ್ತೀರಾ ಎಂದರೆ ಇಲ್ಲಾ ಎನ್ನುತ್ತಾರೆ. ಬಿಯರ್ ಬಾಟಲಿಯಿಂದ ಆರೋಪಿಯು ಚಾಸಾ-1 ರವರಿಗೆ ಹೊಡೆದಿರುತ್ತಾನೆಂದು ಹೇಳಿದ್ದು, ಯಾವ ಕಂಪನಿಯ ಬಿಯರ್ ಬಾಟಲಿ ಎಂದು ಹೇಳುವಿರಾ ಎಂದರೆ ಸಾಕ್ಷಿಯು ಕಿಂಗ್ ಫಿಶರ್ ಬಿಯರ್ ಬಾಟಲಿ ಎಂದು ನುಡಿಯುತ್ತಾರೆ. ಅದು ತಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ಮಹಜರ್ ಮಾಡಲು ಬಂದಾಗ ಎಂದು ಹೇಳುತ್ತಾರೆ. ಚಾಸಾ-1 ಟ್ರಾಕ್ಟರ್ ಚಾಲಕ ಎಂದರೆ ಸರಿ. ಚಾಸಾ-1 ರವರು ಟ್ರಾಕ್ಟರ್ ಅನ್ನು ಚಲಾಯಿಸುತ್ತಿದ್ದಾಗ ಬಿದ್ದು ಆತನಿಗೆ ಗಾಯವಾಗಿರುತ್ತದೆಂದರೆ ಸರಿಯಲ್ಲ. ಚಾಸಾ-1 ರವರಿಗೆ ಮಧ್ಯಪಾನ ಮಾಡುವ ಅಭ್ಯಾಸವಿದೆ ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸುಳುಳ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬೊಪ್ಪನಹಳ್ಳಿ ಗ್ರಾಮದಲ್ಲಿ ಆರೋಪಿಯ ಹೆಸರಿಗೆ ಇರುವ ಖಾಲಿ ಜಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಬೇಕೆಂದು

ಬೋರ್ಡ್ ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ಬೋರ್ಡ್ ಅನ್ನು ಹಾಕಿದ ಜಾಗ ಗ್ರಾಮ ಪಂಚಾಯಿತಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಆರೋಪಿಯು ತನಗೆ ಸೇರಿದ ಖಾಲಿ ಜಾಗವನ್ನು ಅಂಬೇಡ್ಕರ್ ಭವನ ನಿರ್ಮಿಸಲು ಕೊಡದೇ ಇದ್ದುದರಿಂದ ಗ್ರಾಮದಲ್ಲಿ ಪಂಚಾಯಿತಿ ಮಾಡಿ ಅವರನ್ನು ಗ್ರಾಮದಿಂದ ಬಹಿಷ್ಕಾರ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಹಿಷ್ಕಾರ ಹಾಕಿದ್ದ ಬಗ್ಗೆ ನಮ್ಮಗಳ ಮೇಲೆ ಆರೋಪಿ ಪಿರ್ಯಾದು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಯು ನನ್ನ ಹಾಗು ಚಾಸಾ-1 ರವರ ವಿರುದ್ದ ಪಿರ್ಯಾದು ಕೊಟ್ಟಿದ್ದು, ಕೇಸು ದಾಖಲಾಗಿದೆ ಎಂದರೆ ಸರಿ. ಮಹಜರ್ ಅನ್ನು ಪೋಲೀಸರು ಬರೆದಿರುತ್ತಾರೆ. ಮಹಜರ್ ಮಾಡಿದ ಸ್ಥಳದ ಚೆಕ್ಕುಬಂದಿ ಹೇಳುಳಿರಾ ಎಂದರೆ ಸಾಕ್ಷಿಯು ಚೆಕ್ಕುಬಂದಿ ಹೇಳಲು ನನಗೆ ಅಷ್ಟು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಪೋಲೀಸರು ಮಹಜರ್ ಮಾಡುವ ಕಾಲಕ್ಕೆ ಎಷ್ಟು ಗಾಜಿನ ಚೂರುಗಳನ್ನು ಜಪ್ತಿ ಮಾಡಿರುತ್ತಾರೆಂದರೆ ಸಾಕ್ಷಿಯು ಎಷ್ಟು ಚೂರು ಇದ್ದವು ಎಂದು ಹೇಳಲು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಸ್ತೆಯ ಬದಿಯಲ್ಲಿ ಸಾಮಾನ್ಯವಾಗಿ ಗಾಜಿನ ಚೂರುಗಳು ಬಿದ್ದಿರುತ್ತವೆಂದರೆ ಸರಿ. ಹೊಡೆದು ಹೋದ ಗಾಜಿನ ಚೂರುಗಳನ್ನು ಇಟ್ಟುಕೊಂಡು ಚಾಸಾ-1 ರವರು ಆರೋಪಿಯ ವಿರುದ್ದ ಸುಳ್ಳು ಪಿರ್ಯಾದನ್ನು ದಾಖಲು ಮಾಡಿದ್ದು, ಅವರಿಗೆ ಸಹಾಯ ಮಾಡಲು ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1, ಚಾಸಾ-3 ಮತ್ತು ಚಾಸಾ-4 ನನಗೆ ರಕ್ತ ಸಂಬಂಧಿಕರಾಗಬೇಕು ಮತ್ತು

ಚಾಸಾ-6 ನಮ್ಮ ಗ್ರಾಮಸ್ಥರು. ಚಾಸಾ-1 ನನ್ನ ಸಂಬಂಧಿಕರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ಗಾಜಿನ ಬಾಟಲಿಯಿಂದ ಹೊಡೆದಿಲ್ಲ ಮತ್ತು ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**